**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ** 71/2023 **CW**-1 **PW**-1

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಗೋವಿಂದರಾಜು ಬಿ ಎಮ್ |
| ತಂದೆಯ ಹೆಸರುಃ | ಮಂಜಣ್ಣ |
| ವಯಸ್ಸುಃ | 39 ವರ್ಷ |
| ವೃತ್ತಿಃ | ತಹಸೀಲ್ದಾರ್ ಚಿತ್ರದುರ್ಗ |
| ವಾಸ ಸ್ಥಳಃ | ಚಿತ್ರದುರ್ಗ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2022 ರಿಂದ 2024 ರವರೆಗೆ ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17.11.2022 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ನಾನು ನನ್ನ ಕಛೇರಿಯಲ್ಲಿ ಕರ್ತವ್ಯದಲ್ಲಿದ್ದು ಕಛೇರಿ ಮುಂಭಾಗದ ಬಾಗಿಲಿನಲ್ಲಿ ನಿಂತಿದ್ದಾಗ ಆರೋಪಿರವರು ಬಂದು ಕಲ್ಕೆರೆ ಗ್ರಾಮದ ಲಕ್ಷ್ಮಮ್ಮ ಕೋಂ ಕೆಂಪೇಗೌಡ ರವರ ಜಮೀನು ಸರ್ವೆ ನಂ. 79 ರ 3 ಎಕರೆ 16 ಗುಂಟೆ ವಿಸ್ತೀರ್ಣದ ಸ್ವತ್ತನ್ನು ದುರಸ್ತಿ ಕ್ರಮ ಏಕೆ ಕೈಗೊಂಡಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ನನ್ನ ಮೇಲೆ ಕೈಯಿಂದ ಹಲ್ಲೆ ಮಾಡಲು ಪ್ರಯತ್ನಿಸಿದ್ದು, ಆ ಶಬ್ದವನ್ನು ಕೇಳಿಸಿಕೊಂಡು ನಮ್ಮ ಕಛೇರಿ ಸಿಬ್ಬಂದಿಯಾದ ಚಾಸಾ-2 ಮತ್ತು ಚಾಸಾ-3 ರವರು ಹಾಗೂ ಸಾರ್ವಜನಿಕರಾದ ಚಾಸಾ-4 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ಆರೋಪಿಯು ತನಗೆ ಸಂಬಂಧಿಸದೇ ಇದ್ದ ಜಮೀನಿನ ಸಂಬಂಧ ಮಧ್ಯವರ್ತಿಯಾಗಿ ಬಂದು ನನ್ನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ನಂತರ ಈ ಸಂಬಂಧ ನಾನು ಮೆಲಾಧಿಕಾರಿಗಳಿಗೆ ದೂರವಾಣಿ ಕರೆ ಮೂಲಕ ಮಾಹಿತಿ ತಿಳಿಸಿ ಮದ್ಯಾಹ್ನ 12.00 ಗಂಟೆ ಸಮಯದಲ್ಲಿ ಪೋಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರು ನೀಡಿರುತ್ತೇನೆ.

ಸಾಕ್ಷಿ ದೂರು ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಸಂಜೆ 4.30 ರಿಂದ 5.00 ಗಂಟೆ ಸಮಯದಲ್ಲಿ ಪೋಲೀಸರು ಕಛೇರಿಗೆ ಬಂದಿದ್ದು ನಾನು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಪಂಚರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆ.

ಸಾಕ್ಷಿ ಸ್ಥಳ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ದಿಃ 21.11.2022 ರಂದು ಪೋಲೀಸರು ಕಛೇರಿ ಸಿಬ್ಬಂದಿಯಾದ ಚಾಸಾ–2 ಮತ್ತು ಚಾಸಾ–3 ರವರ ಹಾಜರಾತಿ ದೃಢೀಕರಣ ಪತ್ರ ಕೇಳಿದ್ದು ಅದರಂತೆ ಹಾಜರಾತಿ ದೃಢೀಕರಣ ಪತ್ರ ನೀಡಿರುತ್ತೇನೆ.

ಸಾಕ್ಷಿ ನವೆಂಬರ್ 2022 ರ ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿಗಳು ಮನವಿಯೊಂದಿಗೆ ನೀಡಿದ್ದನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–3 ಮತ್ತು ನಿಪಿ–4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ–3(ಎ) ಮತ್ತು ನಿಪಿ–4(ಎ) ಎಂದು ಗುರುತಿಸಲಾಯಿತು.

ಡಿಸೆಂಬರ್ 2022 ರಲ್ಲಿ ಚಾಸಾ–7 ರವರು ನವೆಂಬರ್ ತಿಂಗಳ ನಮ್ಮ ದಿನಚರಿ ಪುಸ್ತಕವನ್ನು ನೀಡುವಂತೆ ಕೇಳಿದ ಮೇರೆಗೆ ನಾನು ಸದರಿ ದಿನಚರಿ ಪುಸ್ತಕವನ್ನು ನೀಡಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ವಿ ವಿ ರವರಿಂದ ಃ**

ನಮ್ಮ ಕಛೇರಿಯಲ್ಲಿ ಸಿಸಿ ಕ್ಯಾಮೆರಾ ವ್ಯವಸ್ಥೆ ಇದೆ ಎಂದರೆ ಸರಿ. ಘಟನೆ ನಡೆದ ದಿನಾಂಕದದು ಸಿಸಿ ಕ್ಯಾಮೆರ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸಿಸಿ ಕ್ಯಾಮೆರಾದ ಫುಟೇಜನ್ನು

ನಾನು ಪೋಲೀಸರಿಗೆ ನೀಡಿಲ್ಲ. ನಮ್ಮ ಕಛೇರಿಯಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ 2021 ರಿಂದ ಇದೆ. ನಮ್ಮ ಕಛೇರಿಯಲ್ಲಿ ಬಯೋಮೆಟ್ರಿಕ್ ಮತ್ತು ಲಿಖಿತ ಹಾಜರಾತಿ ವ್ಯವಸ್ಥೆ ಎರಡೂ ಇದೆ. ಆ ದಿನ ನಾನು ಜಿಲ್ಲಾ ಉಸ್ತುವಾರಿ ಸಚಿವರ ಕಾರ್ಯಕ್ರಮಕ್ಕೆ ಬೆಳಗ್ಗೆ 7.00 ರಿಂದ 8.30 ರವರೆಗೆ ಹಾಜರಾಗಿದ್ದೆ. ಜಿಲ್ಲಾಧಿಕಾರಿಗಳ ಸಭೆಗೆ ನಾನು ಸಂಜೆ 6.00 ಗಂಟೆಗೆ ಹೋಗಿದ್ದೆ. ನಾನು ಚಾಸಾ-7 ರವರಿಗೆ ನೀಡಿದ್ದ ಚಲನ-ವಲನ ದಿನಚರಿಯಲ್ಲಿ ಸಮಯವನ್ನು ನಮೂದಿಸಿಲ್ಲ ಎಂದರೆ ಸರಿ. ಸಮಯವನ್ನು ನಮೂದಿಸುವ ನಿಯಮ ಇದೆ ಎಂದರೆ ಸರಿಯಲ್ಲ.

ಸರ್ವೆ ನಂ. 79 ಕ್ಕೆ ಸಂಬಂಧಿಸಿದಂತೆ ಲಕ್ಷ್ಮಮ್ಮ ರವರ ಅರ್ಜಿ ನೀಡಿದ್ದರು. ಯಾವ ದಿನಾಂಕ ನೀಡಿದ್ದರು ಎಂದು ಗೊತ್ತಿಲ್ಲ. ಬೆಳಗ್ಗೆ 11.00 ಗಂಟೆ ಸಮಯದಲ್ಲಿ ನಮ್ಮ ಕಛೇರಿಯಲ್ಲಿ ಹೆಚ್ಚು ಜನ ಇರುತ್ತಾರೆ ಎಂದರೆ ಸರಿಯಲ್ಲ. ಘಟನೆ ನಡೆದ 5-6 ತಿಂಗಳ ಹಿಂದಿನಿಂದ ಆರೋಪಿ ನನಗೆ ಗೊತ್ತಿದ್ದರು. ಮೊದಲು ಆರೋಪಿ ಲಕ್ಷ್ಮಮ್ಮ ರವರ ಜಮೀನನ್ನು ಏಕೆ ದುರಸ್ತಿ ಮಾಡಿಲ್ಲ ಎಂದು ಕೇಳಿದ್ದರು. ಘಟನೆ ನಡೆದ ನಂತರ ನಾನು ಅರ್ಜಿಯನ್ನು ಯಾರು ನೀಡಿದ್ದರು ಎಂದು ಪರಿಶೀಲಿಸಿಲ್ಲ. ನಿಪಿ-1 ರಲ್ಲಿ ಆರೋಪಿ ಕೈಯಿಂದ ಹಲ್ಲೆ ಮಾಡಲು ಪ್ರಯತ್ನಿಸಿದರು ಎಂದು ನಮೂದಿಸಿಲ್ಲ. ಚಾಸಾ-2 ರಿಂದ ಚಾಸಾ-3 ರವರು ಗಲಾಟೆ ಬಿಡಿಸಿರುತ್ತಾರೆ ಎಂದು ನಿಪಿ-1 ರಲ್ಲಿ ನಮೂದಿಸಿಲ್ಲ. ಆ ಸಮಯದಲ್ಲಿ 8-10 ಜನ ಇದ್ದರು. ಎಷ್ಟು ಜನ ಇದ್ದರು ಎಂದು ನಾನು ನಿಪಿ-1 ರಲ್ಲಾಗಲಿ, ಪೋಲೀಸರಿಗಾಗಲಿ ಹೇಳಿಲ್ಲ. ಆ ದಿನ ನಾನು ಎಂದಿನಂತೆ ಕರ್ತವ್ಯವನ್ನು ನಿರ್ವಹಿಸಿದ್ದೇನೆ ಎಂದರೆ ಸರಿ. ನಮ್ಮ ತಾಲ್ಲೂಕು ಕಛೇರಿಯ ಪಕ್ಕದಲ್ಲಿ ಪೋಲೀಸ್ ಠಾಣೆ ಇದೆ ಎಂದರೆ ಸರಿ. ಗಲಾಟೆ ಆದ ತಕ್ಷಣ ನಾನು ಪೋಲೀಸರಿಗೆ ಮಾಹಿತಿ ತಿಳಿಸಿದ್ದು, 15 ನಿಮಿಷಕ್ಕೆ ಅಲ್ಲಿಗೆ ಬಂದಿರುತ್ತಾರೆ. ಬೆಳಗ್ಗೆ 11.15 ರ ಸಮಯದಲ್ಲಿ ನಾನು ಪೋಲೀಸರಿಗೆ ದೂರು ನೀಡಿಲ್ಲ. ಆ ದಿನ ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿ.

ಸದರಿ ಗಲಾಟೆ ಮುಂಭಾಗಿಲಿನಲ್ಲಿ ಆಗಿರುತ್ತದೆ. ಸದರಿ ಸ್ಥಳಕ್ಕೆ ಚೆಕ್ಕುಬಂದಿ ಪೂರ್ವಕ್ಕೆ – ಮೆಟ್ಟಿಲು, ಪಶ್ಚಿಮಕ್ಕೆ – ತಾಲ್ಲೂಕು ಕಛೇರಿ ಗೊಡೆ, ಉತ್ತರಕ್ಕೆ – ಜೀಪ್ ನಿಲ್ಲಿಸುವ ಜಾಗ, ದಕ್ಷಿಣಕ್ಕೆ – ಬಾಗಿಲು ಇದೆ. ಪೋಲೀಸರು ಮಹಜರ್ ಸಮಯದಲ್ಲಿ ಚೆಕ್ಕುಬಂಧಿಯ ಬಗ್ಗೆ ನನ್ನನ್ನು ಕೇಳಿಲ್ಲ. ಪೋಲೀಸರು ಮಹಜರ್ ಗೆ ಬರುವಂತೆ ಲಿಖಿತ ನೋಟೀಸ್ ನೀಡಿಲ್ಲ. ನಿಪಿ–4 ರ 4 ಕಾಲಂಗಳು ಖಾಲಿಯಾಗಿದೆ ಎಂದರೆ ಸರಿ. ಸದರಿ ಕಾಲಂಗಳಿಗೆ ವೈಟ್ನರ್ ಹಾಕಿರುತ್ತಾರೆ ಎಂದರೆ ಸರಿ. ದೂರನ್ನು ಸೃಷ್ಟಿಸುವ ಸಲುವಾಗಿ ದೂರನ್ನು 1 ಗಂಟೆ ತಡವಾಗಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**